<u>ದಿನಾಂಕಃ **03-07-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ  ವಾದಿ ಪರ ಶ್ರೀ ಬಿ ವಿ ವಕೀಲರಿಂದಃ</u>

ದಾವಾ ಸ್ವತ್ತುಗಳನ್ನು ನಾವು ಖರೀದಿಸುವ ಕಾಲಕ್ಕೆ ಒಂದೇ ಬೆಲೆಗೆ 2 ಆಸ್ತಿಗಳನ್ನು ಖರೀದಿ ಮಾಡಿರುತ್ತೇವೆ.  ನಾವು ಖರೀದಿಸುವ ಕಾಲಕ್ಕೆ 1 ಎಕರೆಗೆ ಸುಮಾರು 33-34 ಲಕ್ಷಕ್ಕೆ ಖರೀದಿ ಮಾಡಿರುತ್ತೇವೆ.  ನಾವು ಖರೀದಿಸಿದ ಕ್ರಯ ಪತ್ರದಲ್ಲಿ ಎಷ್ಟು ಮೊತ್ತಕ್ಕೆ ಆಸ್ತಿಯನ್ನು ಖರೀದಿಸಿರುತ್ತೇವೆ ಎಂಬುದರ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ.  ಸದರಿ ಕ್ರಯ ಪತ್ರದ ಮೊತ್ತವನ್ನು ನಮ್ಮ ತಂದೆ ಪಾವತಿ ಮಾಡಿರುತ್ತಾರೆ.  ನಮ್ಮ ತಂದೆ ಮಾರುಕಟ್ಟೆ ಬೆಲೆಯನ್ನು ನಗದಾಗಿ ಕೊಟ್ಟಿದ್ದು ಎಸ್.ಆರ್ ಮೊತ್ತವನ್ನು ಅಕೌಂಟ್ ಮುಖಾಂತರ ವರ್ಗಾಯಿಸಿರುತ್ತಾರೆ.

2.  ನನಗೆ ಎನ್ ಎಂ ಪ್ರಭಾಕರ್ ಕಾರಂತ್ ಬಿನ್ ಮಹಬಲ್ ಕಾರಂತ್ ಇವರ ಪರಿಚಯ ಇರುತ್ತದೆ.  ವಾದಿಗಳು ಹಾಜರುಪಡಿಸಿರುವ ನಿಪಿ- 1 ಕರಾರು ಪತ್ರಕ್ಕೆ ಸದರಿ ಪ್ರಭಾಕರ್ ಕಾರಂತ್ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.  ನಿಪಿ- 1 ರ ಸ್ಟಾಂಪ್ ಪೇಪರ್ ನಲ್ಲಿ ಮೊದಲನೆ ಪಕ್ಷಗಾರ ನೀವು ಇರುತ್ತೀರಿ ಎಂದರೆ ಸಾಕ್ಷಿ ಯಾರೋ ನನ್ನ ಹೆಸರಲ್ಲಿ ಖರೀದಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ಸ್ಟಾಂಪ್ ಪೇಪರ್ ಪಡೆಯ ಬೇಕಾದರೆ ಅರ್ಜಿಯನ್ನು ಸಲ್ಲಿಸಬೇಕು ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.  ನನ್ನ ಹೆಸರಿನಲ್ಲಿ ಈ ಸ್ಟಾಂಪ್ ಪೇಪರ್ ಅನ್ನು ಖರೀದಿಸಿರುವ ವಿಚಾರ ನನಗೆ ಗೊತ್ತಾದ ನಂತರ ಅದರ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಹೆಸರಿನಲ್ಲಿ ಬೇರೆಯವರು ಈ ಸ್ಟಾಂಪ್ ಪೇಪರ್ ಅನ್ನು ತೆಗೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ.

3. ನನಗೆ ಸುಧೀರ್ ಕುಮಾರ್ ಮುರೋಳ್ಳಿ ಇವರ ಪರಿಚಯ ಇರುತ್ತದೆ.  ನಿಪಿ- 1 ಕ್ಕೆ ಸದರಿ ಸುಧೀರ್ ಕುಮಾರ್ ಮುರೋಳ್ಳಿ  ಬಿಕ್ಲಂದಾರರು ಇರುತ್ತಾರೆ ಎಂದರೆ ಸಾಕ್ಷಿ ನಮ್ಮ ತಂದೆ ಹೇಳಿದ್ದರು ಎಂದು ಉತ್ತರಿಸುತ್ತಾರೆ.  ಸದರಿ ವಿಚಾರವನ್ನು ನಮ್ಮ ತಂದೆ ನನ್ನ ಖಾತೆಗೆ ಹಣ ಬಂದ ನಂತರ ಹೇಳಿರುತ್ತಾರೆ.  ನಿಮ್ಮ ತಂದೆಯ ಬಳಿ ಕರಾರು ಪತ್ರದ  ಒಂದು ಪ್ರತಿ

ಇತ್ತು ಎಂದರೆ ಸರಿಯಲ್ಲ. ನಾನು ಸುಧೀರ್ ಕುಮಾರ್ ಮುರೋಳ್ಳಿ ಇವರ ಕಛೇರಿಗೆ ಸಾಕಷ್ಟು ಬಾರಿ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಧೀರ್ ಕುಮಾರ್ ಮುರೋಳ್ಳಿ ಇವರ ಬಳಿ ನಿಪಿ- 1 ಬರವಣಿಗೆ ಬಗ್ಗೆ ವಿಚಾರಿಸಿರುವುದಿಲ್ಲ.

4. ನನ್ನ ಮತ್ತು ವಾದಿಯ ನಡುವೆ ದಾವಾ ಸ್ವತ್ತಿನ ಸಂಬಂಧ ಕರಾರು ಪತ್ರ ಆಗುವ ಪೂರ್ವದಲ್ಲಿ ಮಾತುಕತೆ ಆಗಿತ್ತು ಎಂದರೆ ಸಾಕ್ಷಿ ಹೆಚ್ ಎಂ ನಟರಾಜ್ ಇವರ ಜೊತೆ ಮಾತು ಕತೆ ಆಗಿತ್ತು ಎಂದು ಉತ್ತರಿಸುತ್ತಾರೆ. ವಾದಿ ಆಸ್ತಿಯನ್ನು ಖರೀದಿ ಮಾಡುತ್ತಾರೆ ಕೊಡುತ್ತೀರ ಎಂದು ನಟರಾಜ್ ಇವರು ನನ್ನ ಹತ್ತಿರ ಕೇಳಿರುತ್ತಾರೆ. ನಿಪಿ- 1 ಆಗುವ 1 ತಿಂಗಳ ಪೂರ್ವದಲ್ಲಿ ಈ ರೀತಿ ಮಾತುಕತೆ ಆಗಿರುತ್ತದೆ. ನನ್ನ ಮತ್ತು ಸುಧೀರ್ ಕುಮಾರ್ ಮುರೋಳ್ಳಿ ನಡುವೆ ಯಾವುದೇ ವೈಯಕ್ತಿಕ ಬಿನ್ನಾಭಿಪ್ರಾಯ ಇರುವುದಿಲ್ಲ. ಅದೇ ರೀತಿ ನನ್ನ ತಂದೆ ಹಾಗೂ ಸುಧೀರ್ ಕುಮಾರ್ ಮುರೋಳ್ಳಿ ನಡುವೆ ಯಾವುದೇ ವೈಯಕ್ತಿಕ ಬಿನ್ನಾಭಿಪ್ರಾಯ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

5. ನಿಮ್ಮ ವಿರುದ್ಧ ಇದೇ ನ್ಯಾಯಾಲಯದಲ್ಲಿ ಕರ್ನಾಟಕ ಬ್ಯಾಂಕಿನವರು ಹಣ ಸಂದಾಯ ಮಾಡುವಂತೆ ದಾವೆ ಹೂಡಿದ್ದರು ಎಂದರೆ ಸಾಕ್ಷಿ ನೆನಪಿರುವುದಿಲ್ಲ ಆದರೆ ನಾನು ಜಾಮೀನುದಾರರಾಗಿದ್ದೆ ಎಂದು ಉತ್ತರಿಸುತ್ತಾರೆ. ನಾನು ಬ್ಯಾಂಕಿಗೆ ಹಣ ಪಾವತಿ ಮಾಡಿರುವುದಿಲ್ಲ ಎಂದು ಬ್ಯಾಂಕಿನವರು ಅಮಲ್ಜಾರಿ ಸಂಖ್ಯೆ 120/2021 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ಆಗ ಜಾಮಿನುದಾರ ಇದ್ದೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಕ್ರಯದ ಕರಾರು ಪತ್ರ ಮಾಡಿಕೊಳ್ಳುವ ಪೂರ್ವದಲ್ಲಿ ನನಗೆ ಹಣಕಾಸಿನ ಸಮಸ್ಯೆ ಇತ್ತು ಎಂದರೆ ಸರಿಯಲ್ಲ. ನನಗೆ ಹಣಕಾಸಿನ ಸಮಸ್ಯೆ ಇದ್ದ ಕಾರಣ ನಾನು ಬ್ಯಾಂಕಿಗೆ ಹಣ ಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಬ್ಯಾಂಕಿಗೆ ಹಣ ಪಾವತಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಖಾತೆಯಿಂದ ಕಡಿತಗೊಳಿಸಿರಬಹುದು ಎಂದು ಉತ್ತರಿಸುತ್ತಾರೆ. ನಾನು ಕರಾರು ಪತ್ರ ಮಾಡಿಕೊಂಡು ಅದರಿಂದ ಬಂದ ಹಣದಲ್ಲಿ ಬ್ಯಾಂಕಿಗೆ ಹಣವನ್ನು ಪಾವತಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನಮ್ಮ ತಂದೆಯ ಸಹಿ ತರ ಯಾರೋ ಸಹಿ ಮಾಡಿ ಪಾವತಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ನಮ್ಮ ತಂದೆಯ ತರ ಸಹಿ ಮಾಡಿದ ಬಗ್ಗೆ ದಾಖಲೆ ನನ್ನ ಬಳಿ ಇರುತ್ತದೆ.

6. ನಾನು ವಾದಿಯಿಂದ 15 ಲಕ್ಷ ಮುಂಗಡ ಹಣ ಪಡೆದುಕೊಂಡು ಅದನ್ನು ಬಳಕೆ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಬಿ.ಆರ್.ಕೌಶಿಕ್ ಎನ್ನುವವರ ಪರಿಚಯ ಇರುತ್ತದೆ. ಸದರಿ ಕೌಶಿಕ್ ಇವರು ನನ್ನ ವಿರುದ್ಧ ಮೂಲ ದಾವೆ ಸಂಖ್ಯೆ 79/2024 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಕರಾರು ಮುಖಾಂತರ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಮೂಲ ದಾವೆ ಸಂಖ್ಯೆ 79/2024 ರ ಆದೇಶ ಪುಟ ಹಾಗೂ ವಾದ ಪತ್ರವನ್ನು ತೋರಿಸಿದ್ದು ಅದನ್ನು ಸಾಕ್ಷಿ ಒಪ್ಪಿದ್ದು ಅದನ್ನು ನಿಪಿ- 11 ಮತ್ತು 12 ಎಂದು ಗುರುತಿಸಲಾಯಿತು. ನಾನು ಬಿ ಆರ್ ಕೌಶಿಕ್ ಇವರ ಜೊತೆ ಒಪ್ಪಂದ ಮಾಡಿಕೊಂಡು ವಾದಿ ನೀಡಿದ ಹಣವನ್ನು ನಾನು ಸದರಿ ಕೌಶಿಕ್ ಇವರಿಗೆ ಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ವಾದಿಯ ಜೊತೆ ಕ್ರಯದ ಕರಾರು ಪತ್ರ ಮಾಡಿಕೊಂಡು ಅವರಿಂದ ಮುಂಗಡವಾಗಿ ರೂ.15,00,000/- ಹಣ ಪಡೆದುಕೊಂಡು ನಿಪಿ- 1 ರಂತೆ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಸದರಿ ನಿಪಿ- 1 ಸುಧೀರ್ ಕುಮಾರ್ ಮುರೋಳ್ಳಿ ಇವರ ಕಛೇರಿಯಲ್ಲಿ ನನ್ನ ಮತ್ತು ಸಾಕ್ಷಿದಾರರ ಸಮಕ್ಷಮ ಆಗಿರುತ್ತದೆ ಎಂದರೆ ಸಾಕ್ಷಿ ಬೇರೆಯವರ ಬಗ್ಗೆ ಗೊತ್ತಿರುವುದಿಲ್ಲ ಆದರೆ ನಾನು ಇರಲ್ಲಿಲ ಎಂದು ಉತ್ತರಿಸುತ್ತಾರೆ. ನಾನು ಕರಾರು ಪತ್ರದ ಪ್ರಕಾರ ನಡೆದುಕೊಳ್ಳದೇ ಇದ್ದ ಕಾರಣ ವಾದಿ ತಮ್ಮ ವಕೀಲರ ಮುಖಾಂತರ ನೋಟೀಸು ನೀಡಿದ್ದು ನಾನು ಅದನ್ನು ತೆಗೆದುಕೊಳ್ಳಲು ನಿರಾಕರಿಸಿರುತ್ತೇನೆ ಎಂದರೆ ಸಾಕ್ಷಿ ನನಗೆ ಯಾವುದೇ ನೋಟೀಸು ಬಂದಿರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯ ವಿರುದ್ಧ ಯಾವುದೇ ಕಾನೂನು ಕ್ರಮ ಕೈ ಗೊಂಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಕ್ರಯದ ಕರಾರು ಪತ್ರ ಆಗುವ ಪೂರ್ವದಲ್ಲಿ ವಾದಿಯೇ ಸ್ವಾಧೀನು ಅನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
**ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,**
**ಸಂಚಾರಿ ನ್ಯಾಯಾಲಯ, ಕೊಪ್ಪ.**

ಸಾಕ್ಷಿದಾರರ ಸಹಿಃ